ದಿನಾಂಕಃ22-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ಃ **1,4** ರಿಂದ **6** ನೇ ಪ್ರತಿವಾದಿಯರ ಪರ ವಕೀಲರಿಂದ ಃ</u>

1. ಇಂದು ನನ್ನನ್ನು 3 ಮತ್ತು 4 ನೇ ವಾದಿಯರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ವಾದಿಯರು ಮಾಹಿತಿ ನೀಡಿ ನನ್ನ ಸಾಕ್ಷ್ಯ ಪ್ರಮಾಣಪತ್ರ ಸಿದ್ಧಪಡಿಸಿದ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣಪತ್ರ ಸಿದ್ಧಪಡಿಸಲು ನಾನು ಮಾಹಿತಿ ನೀಡಿಲ್ಲ. ಮೃತ ಭಾಗವ್ವ ಇವರು ನನ್ನ ಸಂಬಂಧಿಕರಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಂದೇ ಓಣಿಯಲ್ಲಿ ಇದ್ದೇವು ಎಂದು ನುಡಿಯುತ್ತಾರೆ. ನಾನು ಕಂಕಣವಾಡಿ ಗ್ರಾಮದಲ್ಲಿ ಇರುವ ನನ್ನ ತಾಯಿಯ ಮನೆಯಲ್ಲಿ ಇದ್ದೆ ಎಂದರೆ ಸರಿ. ಸದರಿ ಭಾಗವ್ವ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆಕೆ ಮರಣಹೊಂದಿದ್ದಾರೆ ಎಂದು ಮಾತ್ರ ನನಗೆ ಗೊತ್ತಿದ್ದೆ ಎಂದು ನುಡಿಯುತ್ತಾರೆ. ಸದರಿ ಬಾಗವ್ವ 1 ನೇ ಪ್ರತಿವಾದಿಯ ಮನೆಯಲ್ಲಿ ಮರಣ ಹೊಂದಿರುತ್ತಾಳೆ ಎಂದರೆ ಸರಿ. ಸದರಿ ಬಾಗವ್ವ ಮರಣ ಹೊಂದುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಮನೆಯಲ್ಲಿ ಇರುತ್ತಿದ್ದಳು ಎಂದರೆಸ ರಿಯಲ್ಲ. ಸಾಕ್ಷಿಯು ಮುಂದುವರೆದು 4 ನೇ ವಾದಿಯ ಮನೆಯಲ್ಲಿದ್ದರು ಎಂದು ನುಡಿಯುತ್ತಾರೆ. ನಾನು ಕಂಕಣವಾಡಿ ಗ್ರಾಮದಲ್ಲಿ ವಾಸಿಸುತ್ತಿದ್ದು ಸದರಿ ಬಾಗವ್ವ ಇವರ ಬಗ್ಗೆ ಯಾವುದೇ ಮಾಹಿತಿ ಇರದೇಯಿದ್ದರು ನಾನು ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಗವ್ವ ಇವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಮತ್ತು ಕಿವಿ ಕೇಳಿಸುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ದಿನಾಂಕಃ22-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ಃ **1,4** ರಿಂದ **6** ನೇ ಪ್ರತಿವಾದಿಯರ ಪರ ವಕೀಲರಿಂದ ಃ</u>

1. ಇಂದು ನನ್ನನ್ನು 3 ಮತ್ತು 4 ನೇ ವಾದಿಯರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ವಾದಿಯರು ಮಾಹಿತಿ ನೀಡಿ ನನ್ನ ಸಾಕ್ಷ್ಯ ಪ್ರಮಾಣಪತ್ರ ಸಿದ್ದಪಡಿಸಿದ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ಮಕ್ಕಳು ಇರುವುದಿಲ್ಲ. ಮೃತ ಬಾಗವ್ವ ರುದ್ರಸ್ವಾಮಿ ಪೇಟೆ ಓಣಿಯಲ್ಲಿ ವಾಸ ಮಾಡುತ್ತಿದ್ದರು. ನಾನು ಅದೇ ಓಣಿಯಲ್ಲಿ ವಾಸಮಾಡುತ್ತೇನೆ ಎಂದು ತೋರಿಸಲು ದಾಖಲೆ ಹಾಜರ ಪಡಿಸಿಲ್ಲ. ಮೃತ ಭಾಗವ್ವ ಇವರು ನನ್ನ ಸಂಬಂಧಿಕರಲ್ಲ ಎಂದರೆ ಸರಿ. ಸದರಿ ಭಾಗವ್ವ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಬಾಗವ್ವ 1 ನೇ ಪ್ರತಿವಾದಿಯ ಮನೆಯಲ್ಲಿ ಮರಣ ಹೊಂದಿರುತ್ತಾಳೆ ಎಂದರೆ ಸರಿ. ಸದರಿ ಬಾಗವ್ವ ಮರಣ ಹೊಂದುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಮನೆಯಲ್ಲಿ ಇರುತ್ತಿದ್ದಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು 4 ನೇ ವಾದಿ ಗೌರವ್ವ ಸಹ ವ್ಯವಸ್ಥೆ ಮಾಡುತ್ತಿದ್ದರು ಎಂದು ಸ್ವತಃ ನುಡಿಯುತ್ತಾರೆ. ನಾನು ಬಾಗವ್ವ ವಾಸಿಸುವ ಓಣಿಯಲ್ಲಿ ನಾನು ವಾಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಬಾಗವ್ವ ಇವರ ಬಗ್ಗೆ ನನಗೆ ಮಾಹಿತಿ ಇರದೇ ಇದ್ದರೂ

ನಾನು ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಗವ್ವ ಇವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಮತ್ತು ಕಿವಿ ಕೇಳಿಸುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ